ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ| 5, ಸ್ರ್ 1884.

ಗಮನ. ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹ್ಹಾರ್ ನಾಮೆಗಳು.

ಫಿನಾರ್ಷಿಯಲ್ ಇಲಾಖೆ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡ್ಯನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ಯನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಪೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ಯನಲ್ಲಿ ತಮ್ಮ್ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ್ ಡಿಬೆಂಚರ್‌ಗಳನ್ನು ಎಫೇನ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಗಳ ಯೆಂಬ ಜೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಬ್ರಿಟಿಷ್ ಟಂಕಸಾಲೆಯಲ್ಲಿ ಛಾಪಿಸಲ್ಪಟ್ಟ ಅಲ್ವಾರ್ ಸಂಸ್ಥಾನದ ರೂಪಾಯಿಗಳು.

ಸರ್ಕ್ಯುಲರ್ ನಂಬರ್ 2872 ತಾರೀಖು 24ನೇ ಡಿಸಂಬರ್ 1883ನೇ ಇಸವಿ.

ಕಂಟ್ರೋಲರ್‌ಯವರು, ಡಿಸ್ಟ್ರಿಕ್ಟ್ ವ ತಾಲ್ಲೂಕುಗಳ ಟ್ರೆಜರೀ ಆಫಿಸರ್‌ಗಳಿಗೆ ತಿಳಿಸುವದೇನಂದರೆ, ಬಂದು ಭಾಗದಲ್ಲಿ "ವಿಕ್ಟೋರಿಯಾ ಎಂಪ್ರೆಸ್" ಯೆಂತಲೂ, ಮತ್ತೊಂದು ಭಾಗದಲ್ಲಿ "ಬಂದ್ದು ರೂಪಾಯಿ ಅಲ್ವಾರ್ ಸಂಸ್ಥಾನ" ಯೆಂತಲೂ ಬಂದು ಪಾರಸೀ ಮುದ್ರಾಂಕನ ದೊಡನೆ, ಇಂಡ್ಯ ಗವರ್ಮೆಂಟ್ ರೂಪಾಯಿ ಯಂತೆಯೇ ತೂಕವೂ ಕಿಮ್ಮತ್ತೂ ಉಳ್ಳ ಅಲ್ವಾರ್ ಸಂಸ್ಥಾನದ ರೂಪಾಯಿಯು ಇಂಡ್ಯ ಗವರ್ಮೆಂಟಿನ ಬಂದು ಟಂಗಸಾಲೆಯಲ್ಲಿ ಛಾಪಿಸಲ್ಪಟ್ಟು, ಬ್ರಿಟಿಷ್ ಇಂಡ್ಯ ಕೇವೆಯಲ್ಲಿ ನ್ಯಾಯವಾದ ಟೆಂಡರ್ (ಅಂದರೆ ಪಾವತೀ ಮಾಡು

ವದಕ್ಕೆ ಬಂದದ್ದಾಗಿರುವದರಿಂದ) ಸದರೀ ನಾಣ್ಯವು ಕಮ್ಮಿ ತೂಕವುಳ್ಳ ಅಥವಾ ಕಡಮೆ ಮಾಡಲ್ಪಟ್ಟು, ಉಜ್ಜಿಹಾಕಲ್ಪಟ್ಟು ಅಥವಾ ವಿರೂಪ ಪಡಿಸಲ್ಪಟ್ಟು ನಾಣ್ಯಗಳ ಸಂಗತಿಯಲ್ಲಿ ಒದಸ್ತೂರ್ ವಿನಾಯಿತಿಗಳಿಗೆ ಒಳಪಟ್ಟು ಮೈಸೂರು ಶೀಮೆಯ ಖಜಾನೇಗಳಲ್ಲಿ ತೆಗದು ಕೊಳ್ಳಲ್ಪಟ್ಟು ಸಾದರ್ ಮಾಡಲ್ಪಡತಕ್ಕವು.

ಹೆಚ್. ಹಡರ್ಸ್,
ಕಾಂಪ್ಟ್ರೋಲರ್.

ರಿಜಿಸ್ಟ್ರೇಷ್ನ್ ಇಲಾಖೆ.

1882ನೇ ಇಸವಿಯ VIನೇ ನಂಬರ್ ಇಂಡಿಯನ್ ಕಂಪೆನೀಸ್ ಆಕ್ಟಿನ ಕನ್ನಡ ತರ್ಜುಮೆ.

ತಾರೀಖು 4ನೇ ಡಿಸಂಬರ್ 1883.

ಮೇಲ್ಕಂಡ ಆಕ್ಟಿನ ಕಾಪಿಗಳು, ಇದರಡೀ ರುಜು ಮಾಡಿರುವರ ಆಫೀಸ್‌ನಲ್ಲಿ ಕ್ರಯಕ್ಕೆ ಸಿಕ್ಕುತ್ತವೆ.

ಕಾಪಿ 1ಕ್ಕೆ ಕ್ರಯ ರೂಪಾಯಿ 1—4—3.

ಹೆಚ್. ಹಡರ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷ್ನ್ ಮತ್ತು
ಕಂಪೆನಿಗಳ ರಿಜಿಸ್ಟ್ರಾರ್.

ಅಂಬಕೇ ಇಲಾಖೆ.

ನಂ. 423—219. ತಾರೀಖು 20ನೇ ಡಿಸಂಬರ್ 1883.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾ ಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳಾಳಿಗೆ ಹೋಬಳಿ ಅಂಚೆ ಆಫಿಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಅಂಚೆ ಆಫಿಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮಂಜರಾಬಾದ್	ಶುಕ್ರವಾರಸಂತೆ
ಯಿಡತೊರೆ	ರುದ್ರಪಟ್ಣ
ಅತ್ತಿಕುಪ್ಪ	ಕಿಂದಳಿಟ್ಟೆ
ಅರಸೀಕೆರೆ	ಬೂಗಡಿ
ಮೂಡಿಗೆರೆ	ಬಣಕಲ್ಲು
ತಿಪಟೂರು	ಹಾಲ್‌ಕುರಿಕೆ
ಮಂಡ್ಯ	ಬಸರಾಳು
ಚಾಮರಾಜನಗರ	ಪುಡಿಗಾಲ

ಬಿ. ಪುರಿಗೆಂಗಯ್ಯ,
ಅಂಬಕೇ ಕಮೀಷ್ನರ್.

ಫಾರಸ್ಟ್ ಇಲಾಖೆ.

ತಾರೀಖು 24ನೇ ಡಿಸಂಬರ್ 1883.

ಇದರಿಂದ ತಿಳಿಸಲ್ಪಡುವದೇನಂದರೆ, ಇದರಡಿ ಕಂಡ ಪ್ಲಾಂಟೇಷ್ನ್‌ಗಳು—1884ನೇ ಇಸವೀ ಫಿಬ್ರವರೀ 1ನೇ ಮುಕ್ತಾಯ ತ್ ಮೇ 31ರವರಿಗೆ ಬಿಸಿಲುಕಾಲದ ಬಗ್ಗೆ ಜನ ಸಂಚಾರ ತಪ್ಪಿಸಲ್ಪಟ್ಟಿರುತ್ತೆ, ಶಿಟಿಗಾರರು, ಇತ್ ಚಾರ್ಜ್ ಫಾರೆಸ್ಟ್ ಪ್ರೊಟೆಕ್ಷನರರ ಅಪ್ಪಣೆ ಹೊರತಾಯಿ ಈ ಜಾಗ್ಲೀಗಳಲ್ಲಿ ಪ್ರವೇಶಿಸಕೂಡದು.